ಇಂದು ದಿನಾಂಕಃ 17.02.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**<u>ಹೆಚ್ಚುವರಿ ಪಾಟೀ ಸವಾಲುಃ</u>** ಪ್ರತಿವಾದಿಗಳ ಪರ ಶ್ರೀ ಎಸ್.ಹೆಚ್.ಜಿ. ವಕೀಲರಿಂದಃ

1. ನಾನು ದಾವೆಯನ್ನು ಸಲ್ಲಿಸುವ ಕಾಲಕ್ಕೆ ಛಾಯಾಚಿತ್ರಗಳನ್ನು ಹಾಜರು ಪಡಿಸಿರುವುದಿಲ್ಲ. ನಾನು ಕೆರೆಯ ಏರಿಯಿಂದ ಸುಮಾರು 3 ಮೀಟರ್‌ಗಳ ಅಂತರದಿಂದ ನಿಂತುಕೊಂಡು ನಿಪಿ-15 ರಿಂದ ನಿಪಿ-19 ರ ಛಾಯಾಚಿತ್ರಗಳನ್ನು ತೆಗೆಸಿರುತ್ತೇನೆ ಛಾಯಾಚಿತ್ರಗಳನ್ನು ನನ್ನ ಗ್ರಾಮದ ಛಾಯಾಚಿತ್ರಗಳನ್ನು ತೆಗೆಯುವ ವ್ಯಕ್ತಿಯು ತೆಗೆದಿರುತ್ತಾನೆ ಸದರಿ ಛಾಯಾಚಿತ್ರಗಳನ್ನು ತೆಗೆದ ವ್ಯಕ್ತಿಯನ್ನು ಸಾಕ್ಷಿ ವಿಚಾರಣೆ ಮಾಡಿಸಲು ನನಗೆ ತೊಂದರೆ ಇರುವುದಿಲ್ಲ. ನಿಪಿ-15 ರಲ್ಲಿ ಕಂಡುಬರುವ ಮರಗಳ ವಯಸ್ಸು ಸುಮಾರು 30 ವರ್ಷಗಳಾಗಿವೆ ಎಂದರೆ ಸರಿ. ಸದರಿ ಮರಗಳು 20 ರಿಂದ 30 ವರ್ಷಗಳ ಹಿಂದಿನಿಂದಲೂ ಇವೆ ಎಂದು ನನಗೂ ಕೂಡ ಗೊತ್ತಿದೆ ಎಂದರೆ ಸರಿ. ಸದರಿ ಮರಗಳ ರಂಬೆ ಮತ್ತು ಕೊಂಬೆಗಳನ್ನು ನಾನು ಆಗಾಗ್ಗೆ ಕಡಿದಿರುತ್ತೇನೆ. ಸದರಿ ಮರಗಳನ್ನು ಕಡಿಯಲು ಸಂಬಂಧಪಟ್ಟ ಅರಣ್ಯ ಇಲಾಖೆಯಿಂದ ಅನುಮತಿಯನ್ನು ಪಡೆದಿರುವುದಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಮರಗಳನ್ನು ನನ್ನ ಜಮೀನಿನಲ್ಲಿ ಬರೆಳೆದಿರುವುದರಿಂದ ಅನುಮತಿಯ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ.

2. ನಿಪಿ-15 ರಲ್ಲಿ ಕಂಡುಬರುವ ಮರಗಳು ಸರ್ಕಾರಿ ಆಸ್ತಿಯಲ್ಲಿ ಇರುವ ಮರಗಳು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಜಮೀನಿನ ಹದ್ದಿನಲ್ಲಿ ಬರುವ ಮರಗಳು ಎಂದು ನುಡಿಯುತ್ತಾರೆ. ಶ್ರೀರಾಮ ಪುರದ ಕೆರೆಯ ಏರಿಯ ಕಟ್ಟೆಯನ್ನು ನೇರಲಮರದ ಕಟ್ಟೆ ಎಂದು ಕರೆಯುತ್ತಾರೆ. ಸದರಿ ಕಟ್ಟೆಯ ಮೇಲೆ ಬೆಟಗೇರಿ ಗ್ರಾಮಕ್ಕೆ ಹೋಗುವ ರಸ್ತೆ ಇದೆ ಎಂದರೆ ಸರಿ. ವಾದಿಯರು ಹಾಜರು ಮಾಡಿರುವ ಹಸ್ತ ನಕ್ಷೆಯ ಉತ್ತರ ಭಾಗದಲ್ಲಿ ಕೆರೆಯ ಏರಿಯ ರಸ್ತೆ ಇದೆ ಎಂದರೆ ಸರಿ. ಸದರಿ ಕೆರೆ ಏರಿಯ ರಸ್ತೆಯು ಎರಡು ಭಾಗಗಳಾಗಿ ಕವಲು ಒಡೆದು ಒಂದು ರಸ್ತೆಯು ಬೆಟಗೇರಿ ರಸ್ತೆಗೆ ಹೋಗಿ ಮತ್ತೊಂದು ರಸ್ತೆಯು ಜಮೀನುಗಳಿಗೆ ಹೋಗುತ್ತದೆ ಎಂದರೆ ಸರಿಯಲ್ಲ. ಸದರಿ ಕೆರೆ ಏರಿಯ ಮೇಲೆ ಬೆಟಗೇರಿಗೆ ಹೋಗುವ ರಸ್ತೆ ಇದೆ ಎಂದರೆ ಸರಿ.

3. ಸರ್ವೇ ನಂಬರಃ 131 ಮತ್ತು 132 ರ ಆಸ್ತಿಗಳಲ್ಲಿ ನನ್ನ ಸಂಬಂಧಿಕರಿಗೆ ಸೇರಿದ ಆಸ್ತಿಗಳೂ ಸಹ ಇರುತ್ತವೆ. ಸದರಿ ನನ್ನ ಸಂಬಂಧಿಕರನ್ನೂ ಸಹ ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿರುತ್ತೇನೆ. ಆದರೆ, ಒಂದಿಬ್ಬರು ಗ್ರಾಮದಲ್ಲಿ ಇರದೆ ಇದ್ದಿದ್ದರಿಂದ ಅವರನ್ನು ಪಕ್ಷಕಾರರನ್ನಾಗಿ ಮಾಡಿಲ್ಲ. ಸರ್ವೇ ನಂಬರಃ 128 ರಲ್ಲಿ 1 ನೇ ಪ್ರತಿವಾದಿಗೆ ಸೇರಿದ ಜಮೀನನ್ನು ಹೊರತುಪಡಿಸಿ

ಆತನ ಇತರ ಸಂಬಂಧಿಗಳ ಜಮೀನುಗಳು ಇವೆ ಎಂದರೆ ಸರಿ. ನಾನು ಶ್ರೀರಾಮಪುರ ಗ್ರಾಮದ ಗ್ರಾಮ ನಕ್ಷೆಯನ್ನು ನೋಡಿರುತ್ತೇನೆ. ನನ್ನ ಗ್ರಾಮದಲ್ಲಿ ಎಷ್ಟು ಕೆರೆಗಳು ಇವೆ ಎಂದು ಮಾಹಿತಿ ಇದೆ. ಸುಮಾರು 10 ರಿಂದ 12 ಕೆರೆಗಳು ಇವೆ. ಸದರಿ ಕೆರೆ ಏರಿ ಮತ್ತು ಕೆರೆಯ ವಿಸ್ತೀರ್ಣದ ಮಾಹಿತಿ ನನಗೆ ತಿಳಿದಿರುವುದಿಲ್ಲ. (ಹೆಚ್ಚುವರಿ ಪಾಟೀ ಸವಾಲು ಕೇವಲ ನಿಪಿ-15 ರಿಂದ 19 ಛಾಯಾಚಿತ್ರಗಳಿಗೆ ಸಂಬಂಧಿಸಿದ್ದು, ಸದರಿ ಪ್ರಶ್ನೆಯು ಸದರಿ ದಾಖಲೆಗಳ ಮೇಲೆ ಇಲ್ಲದಿರುವುದರಿಂದ ಅದನ್ನು ತಿರಸ್ಕರಿಸಲಾಯಿತು.) ನಿಪಿ-15 ರಿಂದ 19 ರಲ್ಲಿರುವ ವಸ್ತುಸ್ಥಿತಿಗಳು ಛಾಯಾಚಿತ್ರಗಳು ಸುಮಾರು 400 ಮೀಟರ್‌ಗಳ ಅಂತರದಿಂದ ಗ್ರಹಿಸುವ ವಸ್ತುಸ್ಥಿತಿಯನ್ನು ಕಾಣುವ ಛಾಯಾಚಿತ್ರಗಳಾಗಿರುತ್ತವೆ

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.

ಪಿಡಬ್ಲ್ಯೂಃ 2

ಇಂದು ದಿನಾಂಕಃ 17.02.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ವಾದಿಗಳ ಪರ ಶ್ರೀ ಎಸ್.ಪಿ.ಕೆ. ವಕೀಲರಿಂದಃ

ನಾನು ನನ್ನ ಮೌಖಿಕ ವಿಚಾರಣೆಯ ಬದಲಾಗಿ ನನ್ನ ಸಾಕ್ಷಿ ಪ್ರಮಾಣ ಪತ್ರ ಹಾಜರುಪಡಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲ ಅಂಶಗಳನ್ನು ನಾನೇ ಖುದ್ದಾಗಿ ವಕೀಲರಿಗೆ ತಿಳಿಯಿಸಿ, ಬರೆಯಿಸಿರುತ್ತೇನೆ. ಅದರಲ್ಲಿರುವ ಅಂಶಗಳೆಲ್ಲವೂ ನಿಜವಿದ್ದು, ಅದರಲ್ಲಿರುವ ಸಹಿಯು ನನ್ನದೇ ಆಗಿರುತ್ತದೆ.

**ಪಾಟೀ ಸವಾಲುಃ** ಪ್ರತಿವಾದಿಗಳ ಪರ ಶ್ರೀ ಎಸ್.ಹೆಚ್.ಜಿ. ವಕೀಲರಿಂದಃ

1. ನನಗೆ ಈ ಪ್ರಕರಣದ ಸಂಖ್ಯೆ ಗೊತ್ತಿರುವುದಿಲ್ಲ. ನಾನು ಹಾಜರು ಮಾಡಿದ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನನ್ನ ಮಾಹಿತಿ ಆಧಾರದ ಮೇಲೆ ವಕೀಲರು ಬರೆದಿರುತ್ತಾರೆ ಶ್ರೀರಾಮಕಪ್ಪ ಕೆರೆಯ ಏರಿಯ ನಂತರದಲ್ಲಿ ಇನ್ನೂ ಹಲವಾರು ಜನರ ಆಸ್ತಿ ಇರುತ್ತದೆ. ನನಗೆ 46 ವರ್ಷ ವಯಸ್ಸು. ಶ್ರೀರಾಮಕೊಪ್ಪದ ಕೆರೆ ಮತ್ತು ಅದರ ಏರಿಯು ಎಷ್ಟು ವರ್ಷಗಳ ಹಿಂದೆ ಸ್ಥಾಪಿತವಾಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಸದರಿ ಕೆರೆ ಏರಿಯ ಮೇಲೆ ಪ್ರತಿದಿನ ಓಡಾಡುತ್ತೇನೆ. ಕೆರೆ ಏರಿಯ ಮೇಲೆ ಇರುವ ಬಾಂದು ಕಲ್ಲುಗಳನ್ನು ಎಂದು ಮತ್ತು ಯಾರು ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

2. ವಾದಿಯು ಹಾಜರು ಮಾಡಿರುವ ಛಾಯಾಚಿತ್ರಗಳಲ್ಲಿ ಕಾಣಿಸುವ ಮರಗಳು ಕೆರೆಯ ಏರಿಯಿಂದ ಎಷ್ಟು ಮೀಟರ್‌ಗಳ ಅಂತರದಲ್ಲಿ ಇವೆ ಎಂದು ನನಗೆ ಗೊತ್ತಿಲ್ಲ. ಸದರಿ ಏರಿಯಿಂದ ಸುಮಾರು 10 ರಿಂದ 12 ಅಡಿಗಳ ಅಂತರದಲ್ಲಿ ಇರಬಹುದು ಎಂದರೆ ಸರಿ. ನಿಪಿ-15 ರಲ್ಲಿ ಕಾಣುವ ಮರಗಳು ಸುಮಾರು 25 ರಿಂದ 30 ವರ್ಷ ಆಯಸ್ಸಿನ ಮರಗಳು ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.